ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

CC No.790/2021

CW -4 PW - 3

| | | |
|---|---|---|
| ಹೆಸರು | ಃ | ಮನು ಡಿ. ಎಸ್ |
| ತಂದೆಯ ಹೆಸರು | ಃ | ಶಿವಲಿಂಗಯ್ಯ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | HC |
| ವಾಸ | ಃ | ಕನಕಪುರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.08.2024

ನಾನು 2016 ರಿಂದ 2022 ರವರೆಗೆ ಪೋಲಿಸ್ ಪೇದೆಯಾಗಿ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತೇನೆ .

ದಿಃ09.06.2021 ರಂದು 11.30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದಾಗ ಚಾಸಾ-1 ರವರು ನನ್ನನ್ನು, ಚಾಸಾ-5 ಮತ್ತು 6 ರವರನ್ನು ಅವರ ಕೊಠಡಿಗೆ ಬರಮಾಡಿಕೊಂಡು, ಪಂಚಾಯಿತಿದಾರರನ್ನು ಕರೆದು ಆನುಮಾನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು, ಧಾಳಿ ಮಾಡಬೇಕಾಗಿರುತ್ತದೆ ತಾವುಗಳು ಇಲ್ಲೇ ಇರಿ ಎಂದು ತಿಳಿಸಿದರು. ಪಂಚರಾಗಿ ಬರಮಾಡಿಕೊಂಡು,ನಂತರ 11.45 ರ ಸಮಯದಲ್ಲಿ ಚಾಸಾ-1 ರವರೊಂದಿಗೆ ಮತ್ತು ಪಂಚಾಯಿತಿದಾರರೊಂದಿಗೆ ಕೆಎ-42-ಜಿ-923 ಸರ್ಕಾರಿ ವಾಹನದಲ್ಲಿ ಆನುಮಾನಹಳ್ಳಿ ಗ್ರಾಮಕ್ಕೆ ಹೋಗಿ, ದೂರದಲ್ಲಿ ನಿಂತು ನೋಡಲಾಗಿ ಅಂಗಡಿಯ ಹತ್ತಿರ ಒಬ್ಬ ವ್ಯಕ್ತಿ ಬಿಳಿ ಬಣ್ಣದ ಚೀಲದಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸಮವಸ್ತ್ರದಲ್ಲಿ ನಾವು ಮತ್ತು ಚಾಸಾ-1 ರವರು ಹತ್ತಿರ ಹೋಗುತ್ತಿದ್ದಂತೆ ಆ ವ್ಯಕ್ತಿ ಅಲ್ಲಿಂದ ಓಡಿ ಹೋಗಿರುತ್ತಾನೆ.

ನಂತರ ಅಂಗಡಿಯ ಹತ್ತಿರ ಹೋಗಿ ಮುಂಭಾಗದಲ್ಲಿದ್ದ ಚೀಲವನ್ನು ನೋಡಲಾಗಿ MC Dowells Indian Brandy 90 ml 40 Sachet ಗಳು, ಪ್ರತಿ ಸ್ಯಾಚೆಟ್ ನ ಬೆಲೆ 87.55 ಪೈಸೆ ಆಗಿರುತ್ತದೆ. ಅದರ ಒಟ್ಟು ಮೌಲ್ಯ 3502 ರೂ. ಆಗಿರುತ್ತದೆ. 3 ಲೀಟರ್ 600 ಎಂಎಲ್ ಇರುತ್ತದೆ. Old Tavern Whisky 90 ml 21 ಸ್ಯಾಚೆಟ್ ಗಳು ಇದ್ದು, ಪ್ರತಿ ಸ್ಯಾಚೆಟ್ ನ ಬೆಲೆ 53.12 ಪೈಸೆ ಆಗಿರುತ್ತದೆ. ಅದರ ಒಟ್ಟು ಮೌಲ್ಯ 1115 ರೂ. ಆಗಿರುತ್ತದೆ. 1 ಲೀಟರ್ 890 ಎಂಎಲ್ ಇರುತ್ತದೆ. ಒಟ್ಟು ಮದ್ಯ 5,490 ಎಂ ಎಲ್ ಆಗಿರುತ್ತದೆ. ಅದರ ನಿವ್ವಳ ಮೌಲ್ಯ 4617 ರೂ ಆಗಿರುತ್ತದೆ.

ಅದರಲ್ಲಿ ತಲಾ ಒಂದೊಂದನ್ನು ತೆಗೆದು FSL ಗೆ ಕಳುಹಿಸಲು ಎಸ್ ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತದೆ. ನಂತರ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಲಿಂಗರಾಜು ಬಿನ್ ಸಿದ್ದಲಿಂಗಯ್ಯ, 46 ವರ್ಷ, ಒಕ್ಕಲಿಗರು  ಆನುಮಾನಹಳ್ಳಿ ಎಂದು ತಿಳಿಸಿರುತ್ತಾರೆ. ಅಮಾನತ್ತು ಪಡಿಸಿಕೊಂಡ ಮದ್ಯದೊಂದಿಗೆ ಠಾಣೆಗೆ ಬಂದಿರುತ್ತೇವೆ.

ಸದರಿ ಸ್ಥಳದ ಚಕ್ಕಬಂಧಿ ಪೂರ್ವಕ್ಕೆ ಆರೋಪಿ ಮನೆ, ಪಶ್ಚಿಮಕ್ಕೆ ಬೈರೇಗೌಡರ ಮನೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಬೋಳೇಗೌಡರ ಖಾಲಿ ನಿವೇಶನ ಇರುತ್ತದೆ. ಸ್ಥಳದಲ್ಲಿ 12.00 ರಿಂದ 1.00 ಗಂಟೆಯವರೆಗೆ ಬರೆದ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ.

ಸಾಕ್ಷಿಯು ನಿಪಿ-1 ರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.  ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಬಿಳಿ ಬಟ್ಟೆಯಲ್ಲಿ ರುವ ಸ್ಯಾಚೆಟ್ ಗಳನ್ನು  ಮು.ಮಾ. 1 ಮತ್ತು 2  ಎಂದು ಮತ್ತು ಬಿಳಿ ಪ್ಲಾಸ್ಟಿಕ್ ಚೀಲವನ್ನು ಮು.ಮಾ. 3 ಎಂದು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಮಾರ್ಕ್ ಮಾಡಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ  ಆರೋಪಿತರ ಪರ ಶ್ರೀ ವಕೀಲರಿಂದಃ</u>

ನಾನು ಗ್ರಾಮಾಂತರ ಠಾಣೆಯಲ್ಲಿ ಎಸ್ ಪಿ ಡ್ಯೂಟಿ ಯಲ್ಲಿದ್ದೆ. ನಮ್ಮ ಠಾಣೆಯಿಂದ ಆನುಮಾನಹಳ್ಳಿಗೆ 4-5 ಕಿ ಮೀ ಅಂತರವಿದೆ. ಆ ದಿನ ಆನುಮಾನಹಳ್ಳಿಗೆ ಎಷ್ಟು ಬಾರಿ ಹೋಗಿದ್ದೆ ಎಂದು ಗೊತ್ತಿಲ್ಲ. 11.30 ಕ್ಕೆ  ಚಾಸಾ-1 ರವರು ಮೌಖಿಕವಾಗಿ ನಮ್ಮನ್ನು ಅವರ ಕೊಠಡಿಗೆ ಕರೆಸಿಕೊಂಡರು. ಆನುಮಾನಹಳ್ಳಿಗೆ ನಾವು ಚಾಲಕರನ್ನು ಸೇರಿಸಿ 7 ಜನ ಹೋಗಿದ್ದೇವೆ. ಸದರಿ ಸ್ಥಳಕ್ಕೆ ನಾನು  ಚಾಸಾ-1, 5 ಮತ್ತು 6 ಪಂಚಾಯಿತಿದಾರರು ಹೋಗಿದ್ದೆವು. ಪಂಚಾಯಿತಿದಾರರು ಠಾಣೆಯ ಬಳಿಯೇ ಇದ್ದರು. ಪಂಚಾಯಿತಿದಾರರನ್ನು ಠಾಣೆಯ ಹತ್ತಿರಕ್ಕೆ ಯಾರು ಕರೆಸಿದ್ದರು ಎಂದು ಮಾಹಿತಿ ಇಲ್ಲ. ಆನುಮಾನಹಳ್ಳಿಗೆ ಸುಮಾರು 12 ಗಂಟೆಗೆ ಹೋದೆವು.

ಅಂಗಡಿಯಿಂದ 100 ಮೀ ಅಂತರದಲ್ಲಿ ಇದ್ದೆವು. ನಾವು ಧಾಳಿ ಮಾಡಿದ ಅಂಗಡಿ ಸಿದ್ದಪ್ಪಾಜಿ ದೇವಸ್ಥಾನ ಎದುರುಗಡೆಯ ರಸ್ತೆಯಲ್ಲಿ ಇದೆ. ನಾನು ಸದರಿ ಊರಿನಲ್ಲಿ ಬೀಟ್ ಕಾರ್ಯ ಮಾಡಿರುವುದಿಲ್ಲ. ಬೀಟ್ ಕಾರ್ಯ ಮಾಡುವಾಗ ನನಗೆ ಯಾವುದೇ ಮಾಹಿತಿ ಎಸ್ ಪಿ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗ ನೀಡಿರುವುದಿಲ್ಲ, ಪಿ ಎಸ್ ಐ ರವರಿಗೆ ನೀಡುತ್ತಿದ್ದರು. ನಮ್ಮ ಜೀಪ್  ನಿಂತಿದ್ದ ಸ್ಥಳದ ಬಳಿ ಮನೆಗಳು ಇದ್ದವು. ನಾವು ಸಮವಸ್ತ್ರದಲ್ಲಿ ಹೋಗಿದ್ದೆವು.

ಸಮವಸ್ತ್ರದಲ್ಲಿ ಪೋಲಿಸರು ಹೋದಾಗ ಸಾಮಾನ್ಯವಾಗಿ ಜನರು ಸೇರುತ್ತಾರೆ ಎಂದರೆ ಸರಿ. ನಾವು ಸುಮಾರು 3 ನಿಮಿಷ ಅಂಗಡಿಯಿಂದ ದೂರದಲ್ಲಿ ನಿಂತಿದ್ದೆವು. ನಾವು ಅಲ್ಲಿ ಇದ್ದಾಗ ಎಷ್ಟು ಜನ ಸೇರಿದ್ದರು ಎಂದು ಗೊತ್ತಿಲ್ಲ. ನಾವು ಧಾಳಿ ಮಾಡಿದ ಸ್ಥಳದ ಪೋಟೋ ಪಡೆದಿಲ್ಲ. ನಾವು ಧಾಳಿ ಮಾಡಿದ ಗ್ರಾಮದಲ್ಲಿನ ಜನರನ್ನು ಸಾಕ್ಷಿ ಮಾಡಿಕೊಂಡಿಲ್ಲ.

ಸದರಿ ಧಾಳಿ ಮಾಡಿದ ದಿನ ಆನುಮಾನಹಳ್ಳಿಯಲ್ಲಿನ ಬೇರೆ ಯಾವ ಪ್ರಕರಣ ದಾಖಲು ಮಾಡಿಕೊಂಡಿದ್ದೇವೆ ಎಂದು ನನಗೆ ಮಾಹಿತಿ ಇಲ್ಲ. ಧಾಳಿ ಮಾಡಿದಾಗ ಅಂಗಡಿಯ ದಾಖಲೆ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ಧಾಳಿ ಮಾಡಿದ ಜಾಗ ಯಾರಿಗೆ ಸೇರಿದ್ದು ಎಂದು ನನಗೆ ಮಾಹಿತಿ ಇಲ್ಲ. ಮು.ಮಾ. 1 ರಿಂದ 3 ರ ಮೇಲೆ ನನ್ನ ಸಹಿ ಇಲ್ಲ. ಕಲ್ಲಹಳ್ಳಿಯಿಂದ ಆನುಮಾನಹಳ್ಳಿಗೆ 4 ಕಿ ಮೀ ಅಂತರವಿರಬಹುದು. ನಾವು ಯಾವುದೇ ಸ್ಥಳಕ್ಕೆ ಹೋಗಿ ಧಾಳಿ ಮಾಡಿ ಮು.ಮಾ. 1 ರಿಂದ 3 ಅನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಂಗಡಿ ಹೊಂದಿಲ್ಲ ಎಂದೆರ ಸರಿಯಲ್ಲ.

ಮರುವಿಚಾರಣೆಃ ಏನೂ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ